O.S. No.23/2025

P.W.-1

**(ದಿನಾಂಕ 09.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.)**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿವೆ ಮತ್ತು ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನದೇ ಆಗಿರುತ್ತದೆ. ನಾನು ಹಾಜರುಪಡಿಸಿರುವ ದಾಖಲೆಗಳ್ಳು ನಿಶಾನೆ ಕರಿಸಬೇಕೆಂದು ಪ್ರಾರ್ಥಿಸುತ್ತೇನೆ.

**ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ಎ.ಎಸ್.ಬಿ. ವಕೀಲರಿಂದಃ-**

ಸರ್ವೆ ನಂ.258/2 ಕ್ಕೆ ಸಂಬಂಧಿಸಿದ ಗಣಕೀಕೃತ ಪಹಣಿಯನ್ನು ನಿ.ಪಿ.1, ಸರ್ವೆ ನಂ.206/A/1 ಕ್ಕೆ ಸಂಬಂಧಿಸಿದ ಗಣಕೀಕೃತ ಪಹಣಿಯನ್ನು ನಿ.ಪಿ.2, ಸರ್ವೆ ನಂ.359/A2 ಕ್ಕೆ ಸಂಬಂಧಿಸಿದ ಗಣಕೀಕೃತ ಪಹಣಿಯನ್ನು ನಿ.ಪಿ.3, ಉಪತಹಶೀಲ್ದಾರ್ ನೀಡಿದ ವಂಶವೃಕ್ಷದ ದೃಢೀಕರಣ ಪತ್ರವನ್ನು ನಿ.ಪಿ.4, ದಿನಾಂಕ: 10.01.2023 ರ ಉಪವಿಭಾಗಾಧಿಕಾರಿಯವರ ಆದೇಶದ ದೃಢೀಕೃತ ನಕಲನ್ನು ನಿ.ಪಿ.5, ಎಂ.ಆರ್. ನಂ.T349 ಗೆ ಸಂಬಂಧಿಸಿದ ಮಟೇಸನ್ ರಜಿಸ್ಟರಿನ ಪ್ರತಿಯನ್ನು ನಿ.ಪಿ.6, ಎಂ.ಆರ್. ನಂ.T350 ಗೆ ಸಂಬಂಧಿಸಿದ ಮಟೇಸನ್ ರಜಿಸ್ಟರಿನ ಪ್ರತಿಯನ್ನು ನಿ.ಪಿ.7, ಎಂ.ಆರ್. ನಂ.T.351 ಗೆ ಸಂಬಂಧಿಸಿದ ಮಟೇಸನ್ ರಜಿಸ್ಟರಿನ ಪ್ರತಿಯನ್ನು ನಿ.ಪಿ.8, ಲೀಗಲ್ ನೋಟಿಸಿನ ಕಛೇರಿ ಪತ್ರಿಯನ್ನು ನಿ.ಪಿ.9, ಎರಡು ಅಂಚೆ ರಶೀದಿಗಳನ್ನು ಕ್ರಮವಾಗಿ ನಿ.ಪಿ.10 ಮತ್ತು ನಿ.ಪಿ.11, ಅಂಚೆ ಸ್ವೀಕೃತಿಯನ್ನು ನಿ.ಪಿ.12, ನಜಾರಿಯಾದ ನೋಂದಾಯಿತ ಅಂಚೆ ಲಕೋಟೆಯನ್ನು ನಿ.ಪಿ.13, ದಿನಾಂಕ:29.04.2004 ರ ಕ್ರಯಪತ್ರದ ಆನ್‌ಲೈನ್ ದೃಢೀಕೃತ ನಕಲನ್ನು ನಿ.ಪಿ.14, ದಿನಾಂಕ:29.04.2004 ರ ಕ್ರಯ ಕರಾರುಪತ್ರದ ಆನ್‌ಲೈನ್ ದೃಢೀಕೃತ ನಕಲನ್ನು ನಿ.ಪಿ.15 ಎಂದು ಗುರುತಿಸಲಾಯಿತು.

O.S. No.23/2025

**P.W.-1**

**<u>ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದ:-</u>**

(ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಿ ಮುಂದೂಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)**

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.